2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

**ದಿಃ 22.01.2026**

ಅಸಲು ದಾವಾ **.ಸಂ. 101/2013**

ಡಿ .ಡಬ್ಲ್ಯೂ-1

**(ಮುಂದುವರಿದ ಪಾಟೀ ಸವಾಲು ಶ್ರೀ. ಓ .ಡಿ.ಜಿ. ವಕೀಲರಿಂದ ವಾದಿಯರ ಪರವಾಗಿ )**

ವಾದಿ ಹರೀಶ ಅಜ್ಜ ಕೆಂಪೇಗೌಡನಿಗೆ 4 ಜನ ಮಕ್ಕಳು. ನರಸಿಂಹೇಗೌಡ, ಗೋವಿಂದೇಗೌಡ ಮರಣಹೊಂದಿರುತ್ತಾರೆ. ಗೋವಿಂದೇಗೌಡರವರ ಪತ್ನಿಯ ಹೆಸರು ಭಾಗ್ಯಮ್ಮ. ಗೋವಿಂದೇಗೌಡರಿಗೆ ಇಬ್ಬರು ಹೆಣ್ಣು ಮಕ್ಕಳು. ಕೆಂಪೇಗೌಡ ಮಗ ನರಸಿಂಹೇಗೌಡದಿಗೆ ಇಬ್ಬರು ಮಕ್ಕಳು. ಸದರಿ ನರಸಿಂಹೇಗೌಡರು ಮರಣ ಹೊಂದಿರುತ್ತಾರೆ. ಸದರಿ ನರಸಿಂಹೇಗೌಡರ ಪತ್ನಿ ಲಕ್ಷ್ಮಮ್ಮ. ವಾದಿಯ ಅಜ್ಜ ಕೆಂಪೇಗೌಡರ ತಂದೆಯ ಹೆಸರು ಬೆಟ್ಟೇಗೌಡ. ದಾವಾ ಐಟಂ 2ನ್ನು 7ನೇ ಪ್ರತಿವಾದಿ ಲಕ್ಷ್ಮಮ್ಮ ಮತ್ತು 6ನೇ ಪ್ರತಿವಾದಿ ರಾಮೇಗೌಡರಿಂದ ಕ್ರಯಕ್ಕೆ ಪಡೆದಿರುತ್ತೇನೆ. ರಾಮೇಗೌಡರು ಮೃತರಾಗಿರುತ್ತಾರೆ. ಲಕ್ಷ್ಮಮ್ಮ ಬದುಕಿದ್ದಾರೆ. 6ನೇ ಪ್ರತಿವಾದಿ ಅರಕಲಗೂಡು ತಾಲ್ಲೂಕಿನಲ್ಲಿ ಗ್ರಾಮ ಲೆಕ್ಕಾಧಿಕಾರಿ ಆಗಿದ್ದರು. ನಾನು ಪಿಯುಸಿಯವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-7 ರಲ್ಲಿರುವ ಅಂಶಗಳನ್ನು ಓದಿ ಹೇಳಿದ್ದು ದಾವಾ ಐಟಂ ನಂ.2 ಕ್ಕೆ ಸಂಬಂಧಿಸಿದಂತೆ ಸದರಿ ಸ್ವತ್ತನ್ನು ಕೆಂಪೇಗೌಡರು ಸಾಲಿಗ್ರಾಮದ ಆರಿಫ್ ಉನ್ನಿಸ ಮತ್ತು ಅವರ ಕುಟುಂಬದವರು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ರಾಮೇಗೌಡ ಮತ್ತು ಕೆಂಪೇಗೌಡರು ಒಟ್ಟಿಗೆ ಇದ್ದಾಗ ನಾನು ಅವರಿಂದ ಕ್ರಯಕ್ಕೆ ಪಡೆದಿರುತ್ತೇನೆ ಎನ್ನುತ್ತಾರೆ. ಕೆಂಪೇಗೌಡರ ಹೆಸರಿಗೆ ಸದರಿ ನೊಂದಣಿಯಾಗಿತ್ತು ಎಂದರೆ ಸಾಕ್ಷಿಯು ರಾಮೇಗೌಡ ಮತ್ತು ಕೆಂಪೇಗೌಡರು ಒಟ್ಟಿಗೆ ಇದ್ದಾಗ ಪಡೆದಿರುತ್ತೇನೆ. ನಿಪಿ-8ರ ಸ. ನಂ. 52ಕ್ಕೆ ಸಂಬಂಧಿಸಿದಂತೆ 3 ಎಕರೆ 29 ಗುಂಟೆಗೆ ಸಂಬಂಧಿಸಿದಂತೆ ಎಲ್ಲಾ ದಾಖಲಾತಿಗಳು ಕೆಂಪೇಗೌಡರ ಹೆಸರಿನಲ್ಲಿ ಮುಂದುವರಿದು ಕೊಂಡು ಬರುತ್ತಿದ್ದವು ಎಂದರೆ ಅಣ್ಣ ತಮ್ಮಂದಿರು ಒಟ್ಟಿಗೆ ಇದ್ದಿದರಿಂದ ಅವರ ಹೆಸರಿನಲ್ಲಿ ಬರುತ್ತಿತ್ತು. 1989ರಲ್ಲಿ ರಾಮೇಗೌಡ ಮತ್ತು ಕೆಂಪೇಗೌಡ ಇಬ್ಬರು ಹಿಸ್ಸೆ ಮಾಡಿಕೊಂಡಾಗ ಕೆಂಪೇಗೌಡರಿಂದ ನಾನು ಕ್ರಯಕ್ಕೆ ಪಡೆದಿರುತ್ತೇನೆ. ಅವರು ಹಿಸ್ಸೆಗೆ ಸಂಬಂಧಿಸಿದಂತೆ ಪಂಚಾಯಿತಿ ಪಾಲುಪಟ್ಟಿಯನ್ನು ಮಾಡಿಕೊಂಡಿರುತ್ತಾರೆ. ನಾನು ಸದರಿ

ಪಂಚಾಯಿತಿ ಪಾಲು ಪಟ್ಟಿಯನ್ನು ನೋಡಿರುತ್ತೇನೆ. ಸದರಿ ಪಂಚಾಯಿತಿ ಪಾಲು ಪಟ್ಟಿಯಲ್ಲಿ ಕೆಂಪೇಗೌಡರ ಅಣ್ಣ ತಮ್ಮಂದಿರು ಸಹಿ ಹಾಕಿದ್ದರು. ಸದರಿ ದಾಖಲೆಯನ್ನು ನಾನು ನೋಡಿ ನಂತರ ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತೇನೆ. ಪಂಚಾಯಿತಿ ಪಾಲು ಪಟ್ಟಿಯನ್ನು ನಾನು ನ್ಯಾ. ಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆಯುವಾಗ ಕೆಂಪೇಗೌಡರು ಮತ್ತು ಅವರು ರಾಮೇಗೌಡ ಒಟ್ಟಿಗೆ ಇದ್ದು ಭಾಗ ಮಾಡಿಕೊಂಡ ನಂತರ ಕ್ರಯಕ್ಕೆ ಪಡೆದಿರುತ್ತೇನೆ. ರಾಮೇಗೌಡರು ಮೃತರಾಗಿ **4-5** ವರ್ಷವಾಯಿತು. ಸದರಿ ನಿಪಿ-**12** ಮತ್ತು ನಿಪಿ-**13** ರ ಕ್ರಯ ಪತ್ರವನ್ನು ಬರೆಸಿಕೊಳ್ಳುವಾಗ ರಾಮೇಗೌಡರು ಬದುಕಿದ್ದರು ಎಂದರೆ ಇಲ್ಲ. ಈ ವಿಚಾರವಾಗಿ ವಾದಿ ಹರೀಶರವರು **2013**ರಲ್ಲಿ ಸದರಿ ಜಮೀನುಗಳಲ್ಲಿ ನನಗೆ ಹಿಸ್ಸೆ ಬೇಕು ಎಂದು ನ್ಯಾ. ದಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ **6**ನೇ ಪ್ರತಿವಾದಿ ರಾಮೇಗೌಡ ಮತ್ತು **7**ನೇ ಪ್ರತಿವಾದಿ ಲಕ್ಷ್ಮಮ್ಮ ನನ್ನು ಪಕ್ಷಗಾರರರನ್ನಾಗಿ ಮಾಡಿದ್ದರು ಎಂದರೆ ಮಾಡಿದ್ದರು. ಸದರಿ ದಾವೆ ಹೂಡಿದ **3** ವರುಷದ ನಂತರ ದಿಃ**18.05.2016**ರಲ್ಲಿ ಕ್ರಯಪತ್ರ ಮಾಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಸಿವಿಲ್ ನ್ಯಾ.ದಲ್ಲಿ ಸದರಿ ದಾವೆ ವಜಾ ಆದ ನಂತರ ನಾನು ಕ್ರಯಕ್ಕೆ ಪಡೆದಿರುತ್ತೇನೆ. ಸದರಿ ಕ್ರಯಪತ್ರವನ್ನು ದಿಃ**18.05.2016**ರಲ್ಲಿ ಕ್ರಯಪತ್ರ ಬರೆಸಿರುವ ಸಮಯದಲ್ಲಿ ರಾಮೇಗೌಡರು ಬದುಕಿರಲಿಲ್ಲ. ಸದರಿ ಪ್ರಸ್ತುತ ದಾವೆಯ ಬಗ್ಗೆ ತಿಳಿದುಕೊಂಡಿದೀರಾ ಎಂದರೆ ಗಮನ ಇತ್ತು ಆದರೆ ಸಿವಿಲ್ ನ್ಯಾ. ದಲ್ಲಿ ಆದ ಆದೇಶದ ನಂತರ ನಾನು ಕ್ರಯಕ್ಕೆ ಪಡೆದಿರುತ್ತೇನೆ. ನಾನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ಪಹಣಿ **7**ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ರಾಮೇಗೌಡ ಮತ್ತು ಕೆಂಪೇಗೌಡರಿಗೆ ಇಬ್ಬರ ಹೆಸರಿಗೆ ಪಹಣಿ ಬಂದಿತ್ತಾ ಎಂದರೆ ಸರಿ. ಪಾಲು ಪಟ್ಟಿ ಮಾಡುವ ಸಮಂದಲ್ಲಿ ರಾಮೇಗೌಡರು ತನ್ನ ಪತ್ನಿ ಲಕ್ಷ್ಮಮ್ಮನ ಹಸೆರಿಗೆ ಪಹಣಿ ಮಾಡಿಸಲಾಗಿತ್ತು. ಯಾವ ಕಾರಣಕ್ಕಾಗಿ ಲಕ್ಷ್ಮಮ್ಮನ ಹೆಸರಿಗೆ ಪಹಣಿಯನ್ನು ಮಾಡಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ರಾಮೇಗೌಡರು ಗ್ರಾಮ ಲೆಕ್ಕಾಧಿಕಾರಿ ಆದ ಕಾರಣ ಅದರ ಪ್ರಭಾವದಿಂದ ಸ. ನಂ. **51** ಮತ್ತು **52**ರ **2** ಎಕರೆ **39** ಗುಂಟೆ ಯನ್ನು ತನ್ನ ಪತ್ನಿ ಲಕ್ಷ್ಮಮ್ಮ ನ ಹೆಸರಿಗೆ ಮಾಡಿಸಿರುತ್ತಾರೆ. ಸದರಿ ದಾಖಲೆಯನ್ನು ನಾನು ನೋಡೆ ನನ್ನ ಹೆಸರಿಗೆ ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ರಾಮೇಗೌಡ ಮತ್ತು ಕೆಂಪೇಗೌಡರು ಒಟ್ಟಿಗೆ ಇದ್ದಾಗ ನಾನು ಕ್ರಯಕ್ಕೆ ಪಡೆದಿರುತ್ತೇನೆ. **7**ನೇ ಪ್ರತಿವಾದಿ ಲಕ್ಷ್ಮಮ್ಮ ರವರು

ಚನ್ನರಾಯಪಟ್ಟಣದಲ್ಲಿಲ ವಾಸವಾಗಿದ್ದಾರೆ. ನ್ಯಾ.ಕ್ಕೆ ಬರುತ್ತಿಲ್ಲ. ನಾನು ದಾಖಲೆಯನ್ನು ಪರಿಶೀಲಿಸದೇ ವಾಮ ಮಾರ್ಗದಲ್ಲಿ ಆಸ್ತಿಯನ್ನು ಪಡೆದಿರುತ್ತೇನೆ ಎಂದರೆ ಸುಳ್ಳು. ನಾನು ಕ್ರಯಕ್ಕೆ ಪಡೆದ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನಾನು ಮನೆಯನ್ನು ಕಟ್ಟಿಕೊಂಡು ಅದರಲ್ಲೇ ವಾಸವಾಗಿದ್ದೇನೆ. ನಾನು ಶುದ್ದ ಹಸ್ತದಿಂದ ಕ್ರಯಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಲಕ್ಷ್ಮಮ್ಮ ರವನ್ನು ನ್ಯಾ .ಕ್ಕೆ ಕರೆಸಿ ಸಾಕ್ಷಿ ಮಾಡಿಸಲು ತೊಂದರೆ ಇದೆಯೇ ಎಂದರೆ ಅವರಿಗೆ ಆರೋಗ್ಯ ಸರಿಯಿಲ್ಲ. ನಾನು ವಾದಿಗೆ ಮೋಸಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದದರೆ ಸರಿಯಲ್ಲ.

ಮುಂದುವರಿದ ಪಾಟಿ ಸವಾಲಿಗಾಗಿ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.

OS. 101/2013
Dw-1